## ಅಧ್ಯಾಯ-೧

# ಪ್ರಾಸ್ತಾವಿಕ

**ಪೀಠಿಕೆ :** ಪಿರಿಯಾಪಟ್ಟಣ ತಾಲೂಕು, ಕರ್ನಾಟಕ ರಾಜ್ಯದ ದಕ್ಷಿಣದಲ್ಲಿರುವ ಮೈಸೂರು ಜಿಲ್ಲೆಯ ಏಳು ತಾಲೂಕುಗಳಲ್ಲಿ ಒಂದು. ರಾಜ್ಯದ ದಕ್ಷಿಣ ಗಡಿಯಾಗಿರುವ ಈ ಜಿಲ್ಲೆಯ ಪಶ್ಚಿಮಕ್ಕೆ ಇರುವ ಈ ತಾಲೂಕು ಜಿಲ್ಲೆಯ ಪಶ್ಚಿಮ ಹಾಗೂ ವಾಯವ್ಯ ಗಡಿಯೂ ಆಗಿದ್ದು ೧೮೬೯ರಲ್ಲಿ ತಾಲೂಕಾಗಿ ಅಸ್ತಿತ್ವಕ್ಕೆ ಬಂದರೂ, ಹುಣಸೂರು ಈ ತಾಲೂಕಿನ ಕೇಂದ್ರವಾಗಿತ್ತು. ೧೮೮೨ರಲ್ಲಿ ಹುಣಸೂರು ತಾಲೂಕಾದಾಗ ಅದರಲ್ಲಿ ಈ ತಾಲೂಕು ವಿಲೀನವಾಯಿತು. ಸುಮಾರು ೧೯೩೫ರಲ್ಲಿ ಮತ್ತೆ ಸ್ವತಂತ್ರ ಅಸ್ತಿತ್ವ ಪಡೆದ ಈ ತಾಲೂಕಿನ ಗಡಿಯಾಗಿ ವಾಯವ್ಯ ಭಾಗದಲ್ಲಿ ಕಾವೇರಿ ನದಿ ಸ್ವಲ್ಪ ದೂರ ಪ್ರವಹಿಸಿ ನೆರೆಯ ಹಾಸನ ಜಿಲ್ಲೆಯನ್ನು ಹೊಳೆನರಸೀಪುರ ತಾಲೂಕಿನ ಮೂಲಕ ಪ್ರವೇಶಿಸುತ್ತದೆ. ಪ್ರಸ್ತುತ ಹುಣಸೂರು ಉಪವಿಭಾಗಕ್ಕೆ ಸೇರಿರುವ ಈ ತಾಲೂಕು, ಅರಣ್ಯ ಪ್ರದೇಶದಿಂದಾವೃತವಾದ ಅರೆಮಲೆನಾಡು ಪ್ರದೇಶದಲ್ಲಿದ್ದು ಭೌಗೋಳಿಕವಾಗಿ, ಚಾರಿತ್ರಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಸಮೃದ್ಧವಾಗಿದೆ.

ಸುಮಾರು ೮೧೪.೭ ಚ.ಕಿ.ಮೀ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿರುವ ಇದು ಜಿಲ್ಲೆಯ ಐದನೆಯ ದೊಡ್ಡ ತಾಲೂಕಾಗಿದೆ. ಬೆಟ್ಟದಪುರದ ಬೆಟ್ಟ, ಮಾವು ಕಲ್ಲಯ್ಯನ ಬೆಟ್ಟ, ಹೊನ್ನೂರಯ್ಯನ ಬೆಟ್ಟ, ಅವರೆಕಾಯಿ ಬೆಟ್ಟ ಮುಂತಾದ ಬೆಟ್ಟಗಳಿಂದ ಕೂಡಿರುವ ಅರೆಮಲೆನಾಡು ಪ್ರದೇಶವಾಗಿದೆ. ತಾಲೂಕಿನ ಕೊಪ್ಪ, ಬೆಣಗಾಲು, ಹೆಗ್ಗಡೆಹಳ್ಳಿ, ಆಲನಹಳ್ಳಿ, ನವಿಲೂರು, ಹಂದಿಗುಡ್ಡದ ಕಾವಲ್ ಮುಂತಾದೆಡೆ ಇತಿಹಾಸಪೂರ್ವ ಕಾಲಕ್ಕೆ ಸೇರಿದ ಶಿಲಾಯುಗ ಮಾನವರ ಅವಶೇಷಗಳು ಪತ್ತೆಯಾಗಿವೆ. ಅದರಲ್ಲೂ 'ಕೊಪ್ಪ', ನೂತನಶಿಲಾಯುಗದಷ್ಟು ಪ್ರಾಚೀನ ನೆಲೆಯಾಗಿದ್ದು, ಬೃಹತ್ ಶಿಲಾಯುಗ ಸಂಸ್ಕೃತಿಯ ಮಹತ್ವದ ನೆಲೆಯಾಗಿದೆ. ಇತಿಹಾಸ ಕಾಲಕ್ಕೆ ಸಂಬಂಧಿಸಿದಂತೆ ಕದಂಬ, ಗಂಗ, ಚೋಳ, ಚೆಂಗಾಳ್ವ, ಕೊಂಗಾಳ್ವ, ಹೊಯ್ಸಳ, ವಿಜಯನಗರ, ಹೈದರ್-ಟಿಪ್ಪು, ಮೈಸೂರು ಅರಸರ ಆಳ್ವಿಕೆಗೆ ಈ ಪ್ರದೇಶವು ಒಳಪಟ್ಟಿದ್ದು, ಆಯಾ ಕಾಲದ ವಾಸ್ತು-ಶಿಲ್ಪಾವಶೇಷಗಳು ತಾಲೂಕಿನಲ್ಲಿ ಸಾಕಷ್ಟು ಲಭಿಸಿವೆ. ತಾಲೂಕಿನ ಬೆಟ್ಟದಪುರ, ಹೊನ್ನೂರು, ಪಿರಯಾಪಟ್ಟಣ, ಕಿತ್ತೂರು, ರಾವಂದೂರು ಮುಂತಾದವು ಪ್ರಾಚೀನ

ದೇವಾಲಯಗಳನ್ನೊಂದಿರುವ ಪ್ರಮುಖ ನೆಲೆಗಳಾಗಿದ್ದು, ಹೀಗೆ ಪೌರಾಣಿಕ ಮಹತ್ವದ ಕಣಗಾಲ, ಈಟೂರು, ರಾವಂದೂರು, ಅತ್ತಿಗೋಡು, ಮಾವುಕಲ್ಲಯ್ಯ ಬೆಟ್ಟ ಮರತೂರು ಮುಂತಾದವೂ ಉಲ್ಲೇಖಾರ್ಹವೇ. ಹೀಗೆ ಚಾರಿತ್ರಿಕ ಹಿರಿಮೆ, ಸಾಂಸ್ಕೃತಿಕ ಗರಿಮೆಗಳನ್ನು ಹೊಂದಿರುವ ಈ ತಾಲೂಕಿನ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಕೈಗಾರಿಕಾ, ಸಾಹಿತ್ಯಕ, ಆಡಳಿತಾತ್ಮಕ ಅಂಶಗಳನ್ನಿಲ್ಲಿ ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ.

**ಹೆಸರಿನ ಮೂಲ :** 'ಪಿರಿಯಾಪಟ್ಟಣ ತಾಲೂಕು' ಐತಿಹಾಸಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನು ಪಡೆದಿದೆ. ಪ್ರಾಚೀನ ಹಾಗೂ ಅರ್ವಾಚೀನ ಕಾಲಗಳ ನಡುವೆ ಇದು ಅನೇಕ ಸ್ಥಿತ್ಯಂತರಗಳನ್ನು ಕಂಡಿದೆ. ಪಿರಿಯಾಪಟ್ಟಣವು ಚಂಗಾಳ್ವರ ರಾಜಧಾನಿಯಾಗಿಯೂ ಐತಿಹಾಸಿಕ ಮನ್ನಣೆಯನ್ನು ಗಳಿಸಿತ್ತು. ಪಿರಿಯಾಪಟ್ಟಣದ ಮೊದಲ ಹೆಸರು 'ಸಿಂಹಪಟ್ಟಣ' (ಸಿಂಗಪಟ್ಟಣ). ಸಿಂಹಪಟ್ಟಣದ ಹೆಸರಿನ ಬಗೆಗೊಂದು ಐತಿಹ್ಯವಿದೆ. ಚಂಗಾಳ್ವ ಅರಸನೊಬ್ಬನು ಚೋಳರ ಆಗ್ರಹಕ್ಕೆ ತುತ್ತಾದಾಗ, ಸೈನಿಕರು ಅವನನ್ನು ಬಂಧಿಸಿ ಚೋಳರಾಜನು ಬೀಡು ಬಿಟ್ಟಿದ್ದ ಸ್ಥಳಕ್ಕೆ ಎಳೆದೊಯ್ಯುತ್ತಿದ್ದಾಗ, ಮಾರ್ಗಾಯಾಸವನ್ನು ಪರಿಹರಿಸಿಕೊಳ್ಳಲು ಎಲ್ಲರೂ ಒಂದೆಡೆ ತಂಗಿದ್ದರು. ಚಂಗಾಳ್ವ ಅರಸನಿಗೆ ಜೊಂಪು ಹತ್ತಿದಂತಾಗಿ ಮೊಣಕೈಯನ್ನು ತಲೆಗೆ ಆಸರೆಯಿಟ್ಟುಕೊಂಡು ಹಾಗೆಯೇ ನೆಲದಲ್ಲಿ ಒರಗಿಕೊಂಡಾಗ ಅವನಿಗೊಂದು ದಿವ್ಯ ಸ್ವಪ್ನವಾಯಿತು. ಆ ಕನಸಿನಲ್ಲಿ ಮಸಣಿಕಮ್ಮ ದೇವತೆ ಕಾಣಿಸಿಕೊಂಡು "ನಾನು ಈ ಸ್ಥಳದಲ್ಲಿ ನೆಲೆಗೊಂಡಿರುವೆ. ನೀನು ನನ್ನನ್ನು ನಂಬಿ ನನಗೊಂದು ದೇವಾಲಯವನ್ನು ಕಟ್ಟಿಸಿ ನನ್ನನ್ನು ನಿನ್ನ ಮನೆದೇವತೆಯನ್ನಾಗಿ ಸ್ವೀಕರಿಸುವುದಾದರೆ ನಿನ್ನನ್ನು ಈ ಬಂಧನದಿಂದ ಪಾರುಮಾಡುತ್ತೇನೆ" ಎಂದಂತಾಯಿತು. ಚಂಗಾಳ್ವನು ಥಟ್ಟನೆ ಎಚ್ಚರಗೊಂಡು ಶತ್ರುಗಳಿಗೆ ತಿಳಿಯದ ಹಾಗೆ ದೇವತೆಯ ಆದೇಶದಂತೆ ನಡೆದುಕೊಳ್ಳುವುದಾಗಿ ಹರಕೆಯನ್ನು ಕಟ್ಟಿಕೊಂಡನು. ಹಾಗೆ ಹರಕೆಯನ್ನು ಕಟ್ಟಿಕೊಂಡ ಕೂಡಲೆ ಒಂದು ಮಾಯಾಸಿಂಹವು ಕಾಣಿಸಿಕೊಂಡು ಸೈನಿಕರ ಮೇಲೆರಗಿತು. ಈ ಅನಿರೀಕ್ಷಿತ ಆಘಾತದಿಂದ ಸೈನಿಕರು ಸತ್ತೆವೋ ಕೆಟ್ಟೆವೋ ಎಂದು ದಿಕ್ಕಾಪಾಲಾಗಿ ಓಡಿಹೋದರು. ಚಂಗಾಳ್ವನು ವಿಸ್ಮಯದಿಂದ ನೋಡ ನೋಡುತ್ತಿದ್ದಂತೆಯೇ ಸಿಂಹವು ಅದೃಶ್ಯವಾಯಿತು. ಚಂಗಾಳ್ವನು ದೇವಿಯ ಕೃಪೆಯನ್ನು ಭಕ್ತಿಯಿಂದ ಸ್ಮರಿಸುತ್ತ ಸಿಂಹವು ಬಂದು ತನ್ನನ್ನು ರಕ್ಷಿಸಿದ ಸ್ಥಳದಲ್ಲಿ ಒಂದು ಕೋಟೆಯನ್ನು ಕಟ್ಟಬೇಕೆಂದು ನಿರ್ಧರಿಸಿದನು. ಅವನ ನಿರ್ಧಾರ ಕಾರ್ಯಗತವಾಗಿ ಆ ಕೋಟೆಯೂರನ್ನು, 'ಸಿಂಹಪಟ್ಟಣ'ವೆಂದು ಕರೆದನು. ಕ್ರಮೇಣ ಸಿಂಹ ಪದವು ತದ್ಭವಗೊಂಡು ಸಿಂಹಪಟ್ಟಣ, ಸಿಂಗಪಟ್ಟಣವಾಯಿತು. ಐತಿಹಾಸಿಕವಾಗಿ ಈ ಸಿಂಹ ಬೇರೇನೂ ಆಗಿರದೆ, ಕಷ್ಟಕ್ಕೆ ಸಿಕ್ಕಿಕೊಂಡಿದ್ದ ಚಂಗಾಳ್ವರನ್ನು ರಕ್ಷಿಸಿದ ಕದಂಬ ರಾಜ ಮೃಗೇಶವರ್ಮನೇ ಆಗಿದ್ದಾನೆ ಎಂಬುದು ಸೂಕ್ತವೆನಿಸುತ್ತದೆ. ಬಹುಶಃ ಮೃಗೇಶವರ್ಮ ಕಟ್ಟಿದ ಊರು ಸಿಂಹಪಟ್ಟಣ(ಮೃಗೇಶ=ಸಿಂಹ) ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆಯಿತಲ್ಲದೆ ಈ ವಲಯಕ್ಕೆ ಚಂಗಾಳ್ವರನ್ನು ತನ್ನ ಸಾಮಂತರನ್ನಾಗಿ ನೇಮಿಸಿಕೊಂಡಿರಲೂಬಹುದು. ಈಗಿನ, ಪಿರಿಯಾಪಟ್ಟಣದಮ್ಮ ಎಂಬ ಹೆಸರಿನ ಮಸಣಿಕಮ್ಮನ ದೇವಾಲಯವು ಕದಂಬರ ಕಾಲದ ದೇವಾಲಯವಾಗಿದ್ದು ಅದರ ಕಂಬಗಳಲ್ಲಿ ಸಿಂಹಗಳ ಕೆತ್ತನೆಯಿರುವುದಲ್ಲದೆ, ಹಿಟ್ನಹೆಬ್ಬಾಗಿಲು ಗ್ರಾಮದಲ್ಲಿ ಸಿಕ್ಕಿರುವ

ಕದಂಬ ಮೃಗೇಶವರ್ಮನ ತಾಮ್ರಶಾಸನದಲ್ಲಿಯೂ ಸಿಂಹದ ಲಾಂಛನವಿದೆ. ಹೀಗಾಗಿ ಈ ಊರಿಗೆ ಕದಂಬರ ಮೃಗೇಶವರ್ಮನಿಂದ ಸಿಂಹಪಟ್ಟಣ ಎಂಬ ಹೆಸರು ಬಂದಿದ್ದು, ಸಿಂಹದ ತದ್ಭವ ಸಿಂಗವಾದ್ದರಿಂದ ಸಿಂಗಪಟ್ಟಣವೆಂದೂ ಕರೆಯಲ್ಪಡುತ್ತಿತ್ತು.

ಮತ್ತೊಂದು ಐತಿಹ್ಯದ ಪ್ರಕಾರ ಒಮ್ಮೆ ಚಂಗಾಳ್ವ ನಂಜುಂಡರಸನೆಂಬ ದೊರೆಯು ಕುದುರೆಯ ಮೇಲೆ ಕುಳಿತು ಸಿಂಗಪಟ್ಟಣದ ಮೂಲಕ ಹನಗೋಡಿಗೆ ಹೋಗುತ್ತಿದ್ದಾಗ ಅವನಿಗೊಂದು ಅಚ್ಚರಿಯ ದೃಶ್ಯ ಕಣ್ಣಿಗೆ ಬಿತ್ತು. ಅದೇನೆಂದರೆ ಗರಿಕೆಯನ್ನು ತಿನ್ನುತ್ತಿದ್ದ ಮೊಲಗಳು, ಕುದುರೆಯನ್ನೇ ಅಟ್ಟಿಸಿಕೊಂಡು ಬಂದು ಅದರ ಕಾಲನ್ನು ಕಚ್ಚಿ ಗಕ್ಕನೆ ನಿಲ್ಲಿಸುವುದನ್ನು ಕಂಡ ನಂಜುಂಡನು ಇದು ಗಂಡುಭೂಮಿಯೆಂದು ಭಾವಿಸಿ ಅಲ್ಲೊಂದು ಮಣ್ಣಿನ ಕೋಟೆಯನ್ನು ಕಟ್ಟಿಸಿದನಂತೆ.

ಕಾಲಾನಂತರದಲ್ಲಿ ಸಿಂಹಪಟ್ಟಣದಲ್ಲಿ ಪೆರಿಯರಾಜದೇವನು ಕಲ್ಲಿನಕೋಟೆ ಕಟ್ಟಿಸಿದನಂತರ 'ಪೆರಿಯರಾಜ ಪಟ್ಟಣ'ವೆಂಬ ಹೆಸರು ರೂಢಿಗೆ ಬಂದಿತು. ಪಿರಿಯಾಪಟ್ಟಣದ ಚೆನ್ನಿಗರಾಯ ದೇವಸ್ಥಾನದ ಬಾಗಿಲುವಾಡದಲ್ಲಿರುವ ಕ್ರಿ.ಶ. ೧೪೯೦ರ ಶಾಸನ ಶ್ರೀಕಂಠರಾಜೈಯನ ಮಗನಾದ ಶ್ರೀ ಪಿರಿಯಾರಾಜದೇವನು ಪ್ರಾಚೀನ ರಾಜಧಾನಿ ಸಿಂಹಪುರವನ್ನು ಜೀರ್ಣೋದ್ಧಾರ ಮಾಡಿ ಅದಕ್ಕೆ 'ಪೆರಿಯರಾಜ ಪಟ್ಟಣ' ಎಂದು ಪುನರ್‌ನಾಮಕರಣ ಮಾಡಿದನೆಂದು ತಿಳಿಸುತ್ತದೆ. ಅದೇ ಕ್ರಮೇಣ ಪಿರಿಯಾಪಟ್ಟಣ ಆಗಿದೆ.

**ಸ್ಥಾನ ನಿರ್ದೇಶನ ಮತ್ತು ಮೇರೆಗಳು :** ಜಿಲ್ಲೆಯ ಪಶ್ಚಿಮ ಭಾಗದಲ್ಲಿ ೭೫° – ೫೬' ಮತ್ತು ೭೬° – ೧೭' ಪೂರ್ವ ರೇಖಾಂಶ, ಹಾಗೂ ೧೨° – ೦೮' ಮತ್ತು ೧೨° – ೩೩' ಉತ್ತರ ಅಕ್ಷಾಂಶಗಳ ನಡುವೆ ಸಮುದ್ರ ಮಟ್ಟದಿಂದ ಸರಾಸರಿ ೯೦೦ ಮೀ. ಎತ್ತರದಲ್ಲಿ ಈ ತಾಲೂಕು ಹರಡಿಕೊಂಡಿದ್ದು, ಜಿಲ್ಲಾ ಕೇಂದ್ರ ಮೈಸೂರಿನಿಂದ ಪಶ್ಚಿಮಕ್ಕೆ ೭೦ ಕಿ. ಮೀ. ದೂರದಲ್ಲಿದೆ. ಈ ತಾಲೂಕಿನ ಪೂರ್ವಕ್ಕೆ ಹುಣಸೂರು, ಪಶ್ಚಿಮಕ್ಕೆ ಕೊಡಗು ಜಿಲ್ಲೆಯ ಸೋಮವಾರಪೇಟೆ, ದಕ್ಷಿಣಕ್ಕೆ ವಿರಾಜಪೇಟೆ, ಉತ್ತರಕ್ಕೆ ಹಾಸನ ಜಿಲ್ಲೆಯ ಅರಕಲಗೂಡು ತಾಲೂಕುಗಳು ಇದರ ಗಡಿಗಳಾಗಿವೆ. ಪಶ್ಚಿಮದಿಂದ ಪೂರ್ವಾಭಿಮುಖವಾಗಿ ಹರಿಯುವ ಕರ್ನಾಟಕದ ಜೀವನದಿಗಳಲ್ಲೊಂದಾದ ಕಾವೇರಿ, ಹಾಸನ ಜಿಲ್ಲೆ ಮತ್ತು ಈ ತಾಲೂಕಿನ ಪ್ರಮುಖ ಗಡಿರೇಖೆಯಾಗಿದೆ.

**ಭೂ ವಿಸ್ತೀರ್ಣ ಮತ್ತು ಜನಸಂಖ್ಯೆ :** ೨೦೦೧ನೆಯ ಜನಗಣತಿಯ ಪ್ರಕಾರ ತಾಲೂಕಿನ ಜನಸಂಖ್ಯೆ ೨೨೪೨೫೪, ಪುರುಷರು ೧೧೫೮೪೯, ಹೆಂಗಸರು ೧೦೮೪೦೫, ಗ್ರಾಮೀಣ ಪ್ರದೇಶದ ಜನಸಂಖ್ಯೆ ೨೦೯೩೩೦, ನಗರ ಪ್ರದೇಶದ ಜನಸಂಖ್ಯೆ ೧೪೯೨೪, ಜನಸಾಂದ್ರತೆ ಪ್ರತಿ ಚ.ಕಿ.ಮೀ.ಗೆ ೨೭೫, ಲಿಂಗಾನುಪಾತ ೧೦೦೦ ಗಂಡಸರಿಗೆ ೯೩೬ ಹೆಂಗಸರು, ಗ್ರಾಮೀಣ ಪ್ರದೇಶದಲ್ಲಿ ಪರಿಶಿಷ್ಟ ಜಾತಿಯವರು ೩೫೦೨೮ ಪರಿಶಿಷ್ಟ ಪಂಗಡದವರು ೧೫,೬೪೯ ಪಟ್ಟಣ ಪ್ರದೇಶದಲ್ಲಿ ಪರಿಶಿಷ್ಟ ಜಾತಿಯವರು

೧೨೫೫ ಮತ್ತು ಪರಿಶಿಷ್ಟ ಪಂಗಡದವರು ೧೫೮೧ರಷ್ಟಿದ್ದರು. ೨೦೧೦ರ ವೇಳೆಗೆ ತಾಲೂಕಿನ ಒಟ್ಟು ಜನಸಂಖ್ಯೆ ೨,೫೧,೭೦೦ಕ್ಕೆ ತಲುಪಬಹುದೆಂದು ಅಂದಾಜಿಸಲಾಗಿತ್ತು.

**ಆಡಳಿತಾತ್ಮಕ ಘಟಕವಾಗಿ ತಾಲೂಕಿನ ಇತಿಹಾಸ :** ಹಿಂದೆ ಕ್ರಮವಾಗಿ ಗಂಗವಾಡಿ – ೯೬,೦೦೦, ಪುನ್ನಾಟಿ – ೬,೦೦೦ ಪ್ರಾಂತಗಳ ಭೌಗೋಳಿಕ ಭಾಗವಾಗಿದ್ದ ಈ ತಾಲೂಕು ನಂತರದಲ್ಲಿ ಕೊಂಗಾಳ್ವನಾಡೆಂದೂ ಪ್ರಸಿದ್ಧಿ ಪಡೆದಿತ್ತು. ಕಮೀಷನರ್ ಆಳ್ವಿಕೆಯಲ್ಲಿ ಮೈಸೂರು ಜಿಲ್ಲೆಯನ್ನು ೧೪ ತಾಲೂಕುಗಳಾಗಿ ವಿಭಜಿಸಿದಾಗ ಪಿರಿಯಾಪಟ್ಟಣ ತಾಲೂಕು ಒಂದಾಗಿತ್ತು. ೧೮೬೫ರವರೆಗೆ ಹುಣಸೂರು ತಾಲೂಕು ಇದರಲ್ಲೇ ಅಂತರ್ಗತವಾಗಿತ್ತು. ಮುಂದೆ ೧೮೮೨ರಲ್ಲಿ ಪಿರಿಯಾಪಟ್ಟಣ ತಾಲೂಕು, ನೂತನವಾಗಿ ಅಸ್ತಿತ್ವಕ್ಕೆ ಬಂದ ಹುಣಸೂರು ತಾಲೂಕಿನಲ್ಲಿ ಅಂತರ್ಗತವಾಗಿತ್ತು. ಮುಂದೆ ೧೯೩೧ರಲ್ಲಿ ಪಿರಿಯಾಪಟ್ಟಣ ಉಪತಾಲೂಕು ಅಸ್ತಿತ್ವಕ್ಕೆ ಬಂದಿತು. ಆನಂತರ ೧೯೩೫ರಲ್ಲಿ ಪೂರ್ಣ ಪ್ರಮಾಣದ ತಾಲೂಕಾಗಿ ಅಸ್ತಿತ್ವಪಡೆಯಿತು.

ಇದರ ವಿಸ್ತೀರ್ಣ ೮೧೪.೭ ಚ.ಕಿ.ಮೀ.ಗಳಿದ್ದು, ಪಶ್ಚಿಮ ಹಾಗೂ ಉತ್ತರ ದಿಕ್ಕುಗಳಲ್ಲಿ ಪರ್ವತ ಮತ್ತು ಅರಣ್ಯ ಪ್ರದೇಶಗಳಿಂದ ಆವೃತವಾಗಿದೆ. ಪೂರ್ವ ಹಾಗೂ ದಕ್ಷಿಣಕ್ಕೆ ವಿಶಾಲವಾದ ಭೂಪ್ರದೇಶವಿದೆ. ಇದು ೧೯೩೫ರ ಸುಮಾರಿಗೆ ಪೂರ್ಣ ಮಟ್ಟದ ತಾಲೂಕೆಂದು ಮಾನ್ಯವಾಯಿತು. ಈ ತಾಲೂಕಿನಲ್ಲಿ ಒಟ್ಟು ೨೦೩ ಗ್ರಾಮಗಳಿದ್ದು ನಾಲ್ಕು ಹೋಬಳಿಗಳಿವೆ. ಅವುಗಳೆಂದರೆ ಕಸಬಾ, ಹಾರ್‍ನಹಳ್ಳಿ, ರಾವಂದೂರು ಮತ್ತು ಬೆಟ್ಟದಪುರ. ಅಲ್ಲದೆ, ತಾಲೂಕಿನಲ್ಲಿ ೨೬ ಗ್ರಾಮ ಪಂಚಾಯಿತಿಗಳು ಹಾಗೂ ಒಂದು ಪಟ್ಟಣ ಪಂಚಾಯಿತಿ (ಪಿರಿಯಾಪಟ್ಟಣ) ಇದೆ.

**ಭೂಸ್ವರೂಪ :** ಸಮುದ್ರ ಮಟ್ಟದಿಂದ ಸರಾಸರಿ ೨,೭೮೫ ಅಡಿಗಳಷ್ಟು ಎತ್ತರದಲ್ಲಿ ಈ ತಾಲೂಕಿದೆ. ಪಶ್ಚಿಮದಲ್ಲಿ ಸಮುದ್ರಮಟ್ಟದಿಂದ ೯೦೦ ರಿಂದ ೧,೫೦೦ ಮೀಟರ್‌ಗಳಷ್ಟು ಎತ್ತರದಲ್ಲಿದ್ದು, ಪೂರ್ವದ ಮೈದಾನದ ಭಾಗವು ೮೦೦ ರಿಂದ ೯೦೦ ಮೀಟರ್‌ಗಳಷ್ಟು ಎತ್ತರದಲ್ಲಿದೆ. ಇದು ಮಳೆಯಾಧಾರಿತ ಭೂಪ್ರದೇಶವನ್ನು ಹೊಂದಿದೆ.

**ಬೆಟ್ಟಗುಡ್ಡಗಳು :** ಪ್ರಾಕೃತಿಕ ಸೌಂದರ್ಯದ ಬೀಡಾಗಿರುವ ಈ ತಾಲೂಕು ಬೆಟ್ಟಗುಡ್ಡಗಳಿಂದ ಆವೃತವಾಗಿದ್ದು, ಅವುಗಳಲ್ಲಿ ಬೆಟ್ಟದಪುರದ ಬೆಟ್ಟ, ಮಾವುಕಲ್ಲಯ್ಯನ ಬೆಟ್ಟ, ಅವರೆಕಾಯಿ ಗುಡ್ಡ, ಹೊನ್ನೂರಯ್ಯನ ಗುಡ್ಡ ಮುಖ್ಯವಾದವು. **ಅವರೇ ಕಾಯಿ ಗುಡ್ಡ:** ಪಿರಿಯಾಪಟ್ಟಣಕ್ಕೆ ಸುಮಾರು ಎಂಟು ಕಿ. ಮೀ ದೂರದಲ್ಲಿ ಪೂರ್ವ–ಪಶ್ಚಿಮವಾಗಿ ಹಬ್ಬಿರುವ ಈ ಗುಡ್ಡವು ಪಿರಿಯಾಪಟ್ಟಣ ಮತ್ತು ಬೆಟ್ಟದಪುರದ ಮಧ್ಯೆ ಸುಮಾರು ೨೦ ಕಿ. ಮೀ ಉದ್ದ, ೨೦೦ ರಿಂದ ೫೦೦ ಅಡಿ ಎತ್ತರವಿದೆ. ಪ್ರಾಚೀನ ಕಾಲದಲ್ಲಿ ಭೂಕಂಪದೊಡನೆ ಮೇಲೆದ್ದು ಬಂದಂತೆ ಕಾಣುತ್ತದೆ. ಇದು ಅಗ್ನಿಶಿಲೆ ವರ್ಗಕ್ಕೆ ಸೇರಿದುದಾಗಿದ್ದು, ತಾಲೂಕಿನ ಪಶ್ಚಿಮದ ಕೋಮಲಾಪುರ ಗ್ರಾಮದಿಂದ ಪೂರ್ವದ ಕುಡಕೂರುವರೆಗೂ ವ್ಯಾಪಿಸಿದೆ.

**ಬೆಟ್ಟದಪುರದ ಬೆಟ್ಟ** : ಈ ಬೆಟ್ಟ, ತಾಲೂಕಿನಲ್ಲಿ ಮಾತ್ರವಲ್ಲದೆ ಜಿಲ್ಲೆಯಲ್ಲೇ ಹೆಚ್ಚು ಎತ್ತರವಾಗಿದ್ದು, ಪೌರಾಣಿಕ ಹಾಗೂ ಐತಿಹಾಸಿಕ ಮಹತ್ವವನ್ನು ಪಡೆದಿದೆ. ಇದನ್ನು 'ಮಲ್ಲಯ್ಯನ ಬೆಟ್ಟ', 'ಶಿಡ್ಲು ಮಲ್ಲಿಕಾರ್ಜುನ ಬೆಟ್ಟ', 'ಶ್ರೀಶೈಲ', 'ವಿಜಯಗಿರಿ', 'ವಿಜಯಾಚಲ', 'ವೀಣಾದ್ರಿ', 'ಕುಡುಚಾದ್ರಿ' ಎಂಬ ಹೆಸರುಗಳಿಂದಲೂ ಕರೆಯುತ್ತಾರೆ. ಮೈಸೂರು ಪುರಾತತ್ವ ಇಲಾಖೆಯ ವರದಿಯಲ್ಲಿ (೧೯೨೫ ಪುಟ ೧೪) ಈ ಬೆಟ್ಟವನ್ನು ತೀರ್ಥಂಕರ ಬೆಟ್ಟ ಎಂದೂ ಕರೆಯಲಾಗಿದೆ. ಬಹುಶಃ ಮೂಲದಲ್ಲಿ ಈ ಬೆಟ್ಟ ಮಲ್ಲಿನಾಥ ತೀರ್ಥಂಕರನ ಬೆಟ್ಟವಾಗಿದ್ದು ತರುವಾಯ ಮಲ್ಲಿಕಾರ್ಜುನಸ್ವಾಮಿ ಬೆಟ್ಟವಾಗಿರಬಹುದು ಎಂಬ ಅಭಿಪ್ರಾಯವಿದೆ. ಅರಕಲಗೂಡು ಶಾಸನದಲ್ಲಿ ಈ ಪ್ರದೇಶವನ್ನು 'ಭೈರವಪುರ' ಎಂದು ಉಲ್ಲೇಖಿಸಲಾಗಿದೆ. ಅದರಂತೆ ಇಲ್ಲಿ ಹಿಂದೆ ನಾಥಪಂಥೀಯರೂ ಇದ್ದಿರಬಹುದಾದ ಸಾಧ್ಯತೆಯನ್ನು ಇದು ಸೂಚಿಸುತ್ತದೆ. ಇದು ಸಮುದ್ರಮಟ್ಟದಿಂದ ಸುಮಾರು ೪,೩೮೯ ಅಡಿಗಳಷ್ಟು ಎತ್ತರದಲ್ಲಿದ್ದು, ೯,೯೦೦ ಎಕರೆ ಭೂಮಿಯನ್ನು ವ್ಯಾಪಿಸಿದೆ. ಇದರ ಸುತ್ತಳತೆ ೧೨ ಮೈಲಿಗಳಾಗುತ್ತದೆ. ಬೆಟ್ಟಕ್ಕೆ ೩,೦೦೦ಕ್ಕೂ ಹೆಚ್ಚು ಮೆಟ್ಟಿಲುಗಳಿವೆ. ಈ ಬೆಟ್ಟದ ಮೇಲೆ ಶಿಡ್ಲು ಮಲ್ಲಿಕಾರ್ಜುನಸ್ವಾಮಿ ದೇವಾಲಯವಿದ್ದು, ಪ್ರತಿ ವರ್ಷ ವಿಜೃಂಭಣೆಯಿಂದ ಜಾತ್ರೆ ನಡೆಯುತ್ತದೆ. ಈ ದೇವಾಲಯದೊಳಗೆ 'ಸಿಡಿಲು' ಬಂದು ಪ್ರದಕ್ಷಿಣೆ ಹಾಕುತ್ತದೆಯೆಂಬ ಪ್ರತೀತಿ ಇದೆ. ಈ ಬೆಟ್ಟ ಎತ್ತರವಿದ್ದು, ಮುಂಗಾರಿನಲ್ಲಿ ಭೂಪ್ರದೇಶದ ಮೇಲೆ ಉತ್ಪತ್ತಿಯಾಗುವ ಸ್ಥಾಯಿ ವಿದ್ಯುಚ್ಛಕ್ತಿ, ಅಪಾರ ಪ್ರಮಾಣದಲ್ಲಿ ಬೆಟ್ಟದ ನೆತ್ತಿಯ ಮೇಲೆ ಕೇಂದ್ರಿಕೃತವಾಗುವಂತೆ ಅದು ಮಾಡುತ್ತದೆ. ಆದ್ದರಿಂದ ಮಳೆಯ ಹನಿಗಳನ್ನು ಹೊತ್ತ ತೇವಾಂಶಭರಿತ ಮುಂಗಾರಿನ ಮೋಡಗಳಲ್ಲಿ ತಾಂಡವವಾಡುತ್ತಾ ಇದಕ್ಕೆ ವಿರುದ್ಧ ಗುಣದ ಸ್ಥಾಯಿವಿದ್ಯುತ್, ಅತ್ಯಂತ ಸಹಜವಾಗಿ ಈ ಬೆಟ್ಟದ ಶಿಖರಕ್ಕೆ ಆಕರ್ಷಿಸಲ್ಪಟ್ಟು ಸಿಡಿಲಿನ ಉತ್ಪತ್ತಿಗೆ ಕಾರಣವಾಗುತ್ತದೆ ಎಂಬ ಅಭಿಪ್ರಾಯವಿದೆ. **ಮಾವುಕಲ್ಲಯ್ಯನ ಬೆಟ್ಟ:** ಇದು ತಾಲೂಕಿಗೇ ಹೆಸರಾದ ದಟ್ಟವಾದ ಅರಣ್ಯಗಳಿಂದ ಕೂಡಿದ ಬೆಟ್ಟವಾಗಿದೆ. ಸುಮಾರು ೨,೦೦೦ ಅಡಿಗಳಷ್ಟು ಎತ್ತರವಾಗಿರುವ ಬೆಟ್ಟ ಪ್ರದೇಶವಾಗಿದ್ದು ಕೊಡಗಿನವರೆಗೂ ಹಬ್ಬಿನಿಂತಿದೆ. ಬೆಟ್ಟದ ಮೇಲೆ ದಶರಥೇಶ್ವರ ದೇವಾಲಯವಿದೆ. **ಹೊನ್ನೂರಯ್ಯನ ಬೆಟ್ಟ:** ಇದು ಬೈಲಕುಪ್ಪೆಯ ಬಳಿ ಇರುವ ಕಾಡಿನ ಮಧ್ಯದಲ್ಲಿನ ಎತ್ತರವಾದ ಬೆಟ್ಟವಾಗಿದ್ದು, ಮೇಲೆ ಶ್ರೀನಿವಾಸನ ದೇವಾಲಯವಿದೆ. ಇಲ್ಲಿನ ದೇವರನ್ನು ಹೊನ್ನೂರಯ್ಯ ಎಂದೂ ಕರೆಯುತ್ತಾರೆ. ಪುರಂದರದಾಸರು ಇಲ್ಲಿಗೆ ಭೇಟಿ ನೀಡಿದ್ದರೆಂಬ ಪ್ರತೀತಿ ಇದೆ. ಇದಲ್ಲದೆ ಕೊಡಗು ಜಿಲ್ಲೆಗೆ ಸೇರಿಕೊಂಡಂತೆ ತಾಲೂಕಿನ ನೈರುತ್ಯಕ್ಕೆ ಸಿದ್ದೇಶ್ವರ ಮತ್ತು ಜೇನುಕಲ್ಲು ಬೆಟ್ಟಗಳಿವೆ.

**ನದಿಗಳು** : ತಾಲೂಕಿನ ವಾಯವ್ಯ ಭಾಗದಲ್ಲಿ ಮೈಸೂರು ಹಾಗೂ ಹಾಸನ ಜಿಲ್ಲೆಗಳ ನಡುವಣ ಗಡಿರೇಖೆಯಾಗಿ ಹರಿಯುವ ಕಾವೇರಿ ನದಿಯನ್ನು ಹೊರತುಪಡಿಸಿ ತಾಲೂಕಿನಲ್ಲಿ ಯಾವುದೇ ಪ್ರಮುಖ ನದಿಗಳಿಲ್ಲದಿದ್ದರೂ ಹಳ್ಳ–ಕೊಳ್ಳಗಳಿಗೇನೂ ಕೊರತೆಯಿಲ್ಲ.

**ಅಂತರ್ಜಲ :** ಜಿಲ್ಲೆಯ ಇತರೆಡೆಗಳಂತೆ ಈ ತಾಲೂಕಿನಲ್ಲೂ ಅಂತರ್ಜಲವು ಸಮೃದ್ಧವಾಗಿದೆ. ಹಿಂದೆ ಅಂತರ್ಜಲವನ್ನು ಬಾವಿ ತೋಡುವುದರ ಮೂಲಕ ಸದುಪಯೋಗಪಡಿಸಿಕೊಳ್ಳಲಾಗುತ್ತಿತ್ತು. ಆದರೆ ಕೊಳವೆಬಾವಿಗಳ ಅವಿಷ್ಕಾರದಿಂದಾಗಿ ಅಂತರ್ಜಲವನ್ನು ವರ್ಷದುದ್ದಕ್ಕೂ ಬಳಸಿಕೊಳ್ಳುವಂತಾಗಿದೆ. ೨೦೦೮-೦೯ರ ಸಾಲಿನಲ್ಲಿ ತಾಲೂಕಿನಲ್ಲಿ ೧೧ ಬಾವಿಗಳನ್ನು ತಾಲೂಕಿನಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ನೀರಾವರಿ ಪ್ರದೇಶದಲ್ಲಿ ಅಂತರ್ಜಲ ಮಟ್ಟವು ಕನಿಷ್ಟ ೨.೩೫ ಮೀ.ನಿಂದ ಗರಿಷ್ಟ ೬.೯೫ ಮೀ. ಹಾಗೂ ಖುಷ್ಕಿ ಪ್ರದೇಶದಲ್ಲಿ ಕನಿಷ್ಟ ೨೧.೦೫ ಮೀ.ನಿಂದ ಗರಿಷ್ಟ ೨೪.೯೦ ಮೀ. ಆಳದಲ್ಲಿದ್ದು, ತಾಲೂಕಿನಲ್ಲಿ ಲಭ್ಯವಿದ್ದ ಒಟ್ಟು ೫,೫೬೮ ಹೆ.ಮೀ. ಅಂತರ್ಜಲದಲ್ಲಿ ೨,೩೪೧ ಹೆ.ಮೀ. ಬಳಕೆಯಾಗಿದ್ದು ಉಳಿದ ೩,೨೨೭ ಹೆಕ್ಟೇರ್ ಮೀ. ಗಳಷ್ಟು ಅಂತರ್ಜಲವನ್ನು ಬಳಸಿಕೊಳ್ಳಲು ಇನ್ನೂ ಅವಕಾಶವಿತ್ತು. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ೫೯೯೮ ಪಂಪ್‌ಸೆಟ್‌ಗಳಿದ್ದು, ೩೦೦.೬೫ ಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ತನ್ನು ಬಳಸಲಾಗಿತ್ತು. ಅದೇ ಸಾಲಿನಂತ್ಯಕ್ಕೆ ತಾಲೂಕಿನಲ್ಲಿ ಒಟ್ಟು ೧೪೩೫ ಕೊಳವೆ ಬಾವಿಗಳಿದ್ದವು.

**ಭೂಕಂಪನ ಸಾಧ್ಯತೆಗಳು :** ಈ ತಾಲೂಕು ಬೆಟ್ಟಗುಡ್ಡಗಳಿಂದ ಕೂಡಿರುವ ಪ್ರದೇಶವಾಗಿರುವುದರಿಂದ, ಆ ಭಾಗಗಳಲ್ಲಿ ಬಹಳ ಹಿಂದೆ ಲಘು ಭೂಕಂಪನಗಳು, ಸಂಭವಿಸಿರುವುದು ಸ್ಥಳೀಯವಾಗಿ ತಿಳಿದುಬರುತ್ತದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಭೂಕಂಪನದ ಯಾವ ಅನುಭವವೂ ಆಗಿಲ್ಲ.

**ಖನಿಜಸಂಪತ್ತು :** ಈ ತಾಲೂಕು ಬೆಟ್ಟಗುಡ್ಡಗಳಿಂದ ಕೂಡಿದ್ದು, ಇವು ತಾಲೂಕಿನ ಪ್ರಮುಖ ಪ್ರಾಕೃತಿಕ ಸಂಪನ್ಮೂಲಗಳಾಗಿವೆ. 'ಬೆಟ್ಟದಪುರ' ಎಂಬ ಹೆಸರೇ ಸೂಚಿಸುವಂತೆ ಇಲ್ಲಿ ಎರಡು ವಿಧದ ಶಿಲೆಗಳಿದ್ದು ಅವನ್ನು ಕರಿಕಲ್ಲು ಹಾಗೂ ಬಿಳಿಕಲ್ಲು ಎಂದು ವಿಂಗಡಿಸಲಾಗಿದೆ. ಈ ಬೆಟ್ಟವು ಭಾರೀ ಗಾತ್ರದ ಕಪ್ಪುಬಂಡೆಗಳಿಂದ (Black Granite) ಕೂಡಿದ್ದು, ಇವು ಅಮೂಲ್ಯವಾಗಿವೆ. ಅದರ ತಪ್ಪಲು ಪ್ರದೇಶಕ್ಕೆ ಹೊಂದಿಕೊಂಡಂತೆ ಇರುವ ವಡ್ಡರಕ್ಯಾಂಪ್ ಕಾಲೋನಿಯಲ್ಲಿ ಕಟ್ಟಡದ ನಿರ್ಮಾಣಕ್ಕೆ ಬಳಸುವ ಸೈಜ್‌ಕಲ್ಲು, ಚಪ್ಪಡಿ, ಜಲ್ಲಿ ಮುಂತಾದವುಗಳನ್ನು ಹೇರಳವಾಗಿ ಉತ್ಪಾದಿಸಲಾಗುತ್ತಿದೆ.

ಕುಡುಕೂರು ಹಾಗೂ ಕಣಗಾಲು ಗ್ರಾಮಗಳ ಬಳಿ ವಿಶೇಷವಾದ ಅಗ್ನಿಶಿಲೆಗಳು ಕಂಡು ಬಂದಿದ್ದು, ಕೆತ್ತನೆ ಕಾರ್ಯಕ್ಕೆ ಇವು ಯೋಗ್ಯವಾಗಿವೆ. ಅದರಿಂದಾಗಿ ಇತ್ತೀಚಿನ ವರ್ಷಗಳಲ್ಲಿ ಇಲ್ಲಿಂದ ಬೃಹತ್ ಪ್ರಮಾಣದಲ್ಲಿ ಕಲ್ಲುಗಳನ್ನು ಇತರೆಡೆಗೆ ಸಾಗಿಸುವ ಕಾರ್ಯ ನಿರಂತರವಾಗಿ ನಡೆಯುತ್ತಿದೆ. ಪಂಚವಳ್ಳಿಗ್ರಾಮದ ಬಳಿಯೂ ಸುಮಾರು ೧೬ ಕಡೆ ಗಣಿಗಾರಿಕೆ ನಡೆಯುತ್ತಿದ್ದು ಇಲ್ಲಿ ಜನರ ಶ್ರಮದ ಜೊತೆಗೆ ಯಂತ್ರದ ಸಹಾಯದಿಂದ ಜಲ್ಲಿಕಲ್ಲನ್ನು ಉತ್ಪಾದಿಸಲಾಗುತ್ತಿದೆ. ಇದೇ ರೀತಿಯ ಬಿಳಿ ಅರೆಕ್ವಾರಿಗಳು (ಗ್ರಾನೈಟ್) ಕೊಪ್ಪ, ವಡ್ಡರಬೋರೆ, ಆವರ್ತಿ ಮುಂತಾದೆಡೆಗಳಲ್ಲೂ ಇವೆ.

**ಪ್ರಾಣಿ ಸಂಪತ್ತು :** ಈ ತಾಲೂಕು, ಹಿಂದೆ ಅಪಾರ ಅರಣ್ಯ ಸಂಪತ್ತನ್ನು ಹೊಂದಿದ್ದರಿಂದ ಪ್ರಾಣಿ ಸಂಪತ್ತು ಹೇರಳವಾಗಿತ್ತು. ಹುಲಿ, ಚಿರತೆ, ಆನೆ, ಕಾಡೆಮ್ಮೆ, ಜಿಂಕೆ, ಕಡವೆ, ನವಿಲು ಮುಂತಾದ ಪ್ರಾಣಿಗಳನ್ನು, ನವಿಲು, ಕಾಡುಕೋಳಿ, ಗೊಜಲಹಕ್ಕಿ, ಗಿಳಿ ಮುಂತಾದ ಪಕ್ಷಿಗಳೂ, ನಾನಾ ತರಹದ ಪತಂಗಗಳೂ ವಿವಿಧ ನಮೂನೆಯ ಹಾವುಗಳೂ ಇದ್ದವು. ಆದರೆ ಅರಣ್ಯಗಳು ವಿರಳವಾದಂತೆ ಇವುಗಳ ಸಂತತಿಯೂ ಪ್ರಸ್ತುತ ಕ್ಷೀಣಿಸುತ್ತಿದೆ. ಈಗ ಆನೆ, ನರಿ, ಜಿಂಕೆ, ಮೊಲ, ನವಿಲು ಮುಂತಾದ ಕೆಲವೇ ಪ್ರಾಣಿಗಳು ಅಲ್ಲಲ್ಲಿ ಕಂಡು ಬರುತ್ತವೆ.

**ಸಸ್ಯ ಸಂಪತ್ತು :** ಈ ತಾಲೂಕು, ಭೌಗೋಳಿಕ ಪ್ರದೇಶದ ಶೇ. ಏಳರಷ್ಟು ಅರಣ್ಯ ಪ್ರದೇಶವನ್ನು ಹೊಂದಿದೆ. ತಾಲೂಕಿನ ಮೀಸಲು ಅರಣ್ಯ ಪ್ರದೇಶಗಳೆಂದರೆ; ದೊಡ್ಡ ಹರವೆ ಕಾಡು: ೪,೦೨೨.೭೩ ಎಕರೆ; ಮುದ್ದೇನಹಳ್ಳಿ ಕಾಡು : ೪೫೦.೧೩ ಎಕರೆ; ಮುಮ್ಮಡಿ ಕಾವಲು ಕಾಡು: ೨,೬೫೮.೧೧ ಎಕರೆ; ಆನೆ ಚೌಕೂರು ಕಾಡು: ೩,೮೫೭.೨೨ ಎಕರೆ; ಕಚುವಿನಹಳ್ಳಿ ಕಾಡು: ೧,೯೩೭.೬೭ ಎಕರೆ; ಗುಡ್ಡದಹಳ್ಳ ಕಾಡು: ೧,೯೧೭.೦೫ ಎಕರೆ; ಒಟ್ಟು: ೧೪,೮೪೬.೮೪ ಎಕರೆಗಳು. ಇಲ್ಲಿನ ಅರಣ್ಯ ಪ್ರದೇಶಗಳಲ್ಲಿ ಬೆಲೆಬಾಳುವ ಶ್ರೀಗಂಧ, ಬೀಟೆ, ಹೊನ್ನೆ, ತೇಗ, ಮತ್ತಿ, ದೇವದಾರು, ಮಾವು, ಬೇವು, ಬಿದಿರು ಮುಂತಾದ ಉತ್ತಮ ಜಾತಿಯ ಮರಗಳಿವೆ. ಅರಣ್ಯಗಳಲ್ಲಿ ಬೆಲೆಬಾಳುವ ಮರ ಹಾಗೂ ಪ್ರಾಣಿಗಳಷ್ಟೇ ಅಲ್ಲದೆ ಕಾಗದದ ಕಾರ್ಖಾನೆಗೆ ಬೇಕಾಗುವ ಹೆಬ್ಬಿದಿರು, ಅರಗು, ಬಣ್ಣದ ಕಾರ್ಖಾನೆಗೆ ಅತಿ ಮುಖ್ಯವಾಗಿ ಬೇಕಾಗಿರುವ ಕಲ್ಲುಹೂ ಮತ್ತು ಮರದಹೂ ವಿಶೇಷವಾಗಿ ದೊರೆಯುತ್ತವೆ. ಈ ಬಗೆಯ ಹೂಗಳಿಂದ ಚುನಾವಣೆಗಳಲ್ಲಿ ಗುರುತು ಮಾಡಲು ಉಪಯೋಗಿಸುವ ಅಳಿಸಲಾಗದ ಶಾಯಿ ಹಾಗೂ ಬರೆಯುವ ಶಾಯಿಯನ್ನು ಸಹಾ ತಯಾರಿಸಲಾಗುವುದು. ಹಾಗೆಯೇ ಸೀಗೇಕಾಯಿ, ನೆಲ್ಲಿಕಾಯಿ, ಹುಣಸೇಹಣ್ಣು, ಜೇನುತುಪ್ಪ, ಮೇಣ, ಅಂಟುವಾಳದ ಕಾಯಿ, ಮುಂತಾದ ಉಪ–ಉತ್ಪನ್ನಗಳು ಹಾಗೂ ಆಯುರ್ವೇದಕ್ಕೆ ಬೇಕಾಗುವ ಗಿಡಮೂಲಿಕೆಗಳೂ ದೊರೆಯುತ್ತವೆ.

**ಸಾಮಾಜಿಕ ಅರಣ್ಯ:** ತಾಲೂಕಿನಲ್ಲಿ ವ್ಯವಸಾಯಕ್ಕೆ ಯೋಗ್ಯವಲ್ಲದ ಭೂ–ಪ್ರದೇಶಗಳಲ್ಲಿ ಸರ್ಕಾರದ ವತಿಯಿಂದ ಸುಮಾರು ೫೮೦ ಹೆಕ್ಟೇರ್ ಭೂಮಿಯಲ್ಲಿ ಸಾಮಾಜಿಕ ಅರಣ್ಯವನ್ನು ಅಭಿವೃದ್ಧಿ ಪಡಿಸಲಾಗಿದೆ. ನೈಸರ್ಗಿಕವಲ್ಲದ, ಮಾನವಶಕ್ತಿ ಬಳಸಿ, ಗಿಡನೆಟ್ಟು ಬೆಳೆಸಲಾಗುವ ಅರಣ್ಯವನ್ನು 'ನೆಡುತೋಪು' ಅಥವಾ 'ಸಾಮಾಜಿಕ ಅರಣ್ಯ' ಎಂದು ಕರೆಯಲಾಗುತ್ತದೆ. ಈ ರೀತಿಯ ನೆಡುತೋಪುಗಳಲ್ಲಿ, ಅಕೇಸಿಯಾ, ನೀಲಗಿರಿ, ಸುರಗಿ, ಹುಣಸೆ, ಬೇವು, ಹೊಂಗೆ, ಸೈತೋಡಿಯಾ ಮುಂತಾದ ಜಾತಿಯ ಮರಗಳನ್ನು ಬೆಳೆಸಲಾಗುತ್ತದೆ. ಈ ಬಗೆಯ ಅರಣ್ಯ ಬೆಳವಣಿಗೆಯಿಂದ, ಬರಡಾದ ಭೂಮಿ ಹಸಿರಾಗಿ, ಭೂಸಾರ ಸಂರಕ್ಷಣೆಯಾಗುವುದಲ್ಲದೆ, ಸರ್ಕಾರಿ ಜಮೀನಿನ ಒತ್ತುವರಿಯನ್ನೂ ತಡೆದಂತಾಗಿದೆ. ನೂರಾರು ನಿರುದ್ಯೋಗಿಗಳಿಗೆ, ಕೂಲಿಕಾರ್ಮಿಕರಿಗೆ ತಾತ್ಕಾಲಿಕ ಉದ್ಯೋಗ ದೊರಕಿದೆ. ಸಾಮಾಜಿಕ ಅರಣ್ಯವಲಯಗಳಲ್ಲಿ ಬೆಳೆಸಲಾಗುವ ಎಲ್ಲಾ ಜಾತಿಯ ಸಸಿಗಳನ್ನು

ತಮ್ಮ ಜಮೀನಿನಲ್ಲಿ ಬೆಳೆಸಲು ಸಾರ್ವಜನಿಕರಿಗೆ ಕನಿಷ್ಠ ದರದಲ್ಲಿ ವಿತರಿಸಲಾಗುತ್ತದೆ. ೨೦೧೯ರ ಸಾಲಿನಲ್ಲಿ ಅರಣ್ಯ ಇಲಾಖೆಯಿಂದ ತಾಲೂಕಿನಲ್ಲಿ ೭,೨೩,೧೦೦ ಸಸಿಗಳನ್ನು ನೆಡಲಾಗಿತ್ತೆಂದು ತಿಳಿದುಬರುತ್ತದೆ.

**ವಾಯುಗುಣ :** ಭೂಗೋಳದಲ್ಲಿ ಪಿರಿಯಾಪಟ್ಟಣ ತಾಲ್ಲೂಕಿನ ಸ್ಥಾನಮಾನಗಳನ್ನು ಗಮನಿಸಿದಾಗ ಮುಖ್ಯವಾಗಿ ಕಂಡುಬರುವುದು ಅದರ ಅಕ್ಷಾಂಶ ಮತ್ತು ರೇಖಾಂಶಗಳು. ಅವು ಈ ರೀತಿಯಿವೆ. ಅಕ್ಷಾಂಶ – ಉತ್ತರಕ್ಕೆ, ೧೨೧/೨° ಮತ್ತು ರೇಖಾಂಶ – ಗ್ರೀನ್‌ವಿಚ್‌ನಿಂದ ಪೂರ್ವಕ್ಕೆ ೭೬°. ಸೂರ್ಯ ಜೂನ್ ೨೧ರಂದು ಕರ್ಕಾಟಕ ಸಂಕ್ರಾಂತಿ ವೃತ್ತದ ಮೇಲೆ ನೇರವಾಗಿ ಬೆಳಗುತ್ತದೆ. ಅಂದರೆ ಮಾರ್ಚ್ ೨೧ ರಿಂದ ಜೂನ್ ೨೧ರವರೆಗಿನ, ೯೨ ದಿನಗಳಲ್ಲಿ ಸೂರ್ಯ ಭೂಮಧ್ಯ ರೇಖೆಯಿಂದ ಉತ್ತರಕ್ಕೆ ಕರ್ಕಾಟಕ ಸಂಕ್ರಾಂತಿ ವೃತ್ತದವರೆಗಿನ, ೨೩ ೧/೨° ಅಯನದ ಚಲನೆಯನ್ನು ಪೂರ್ಣಗೊಳಿಸುತ್ತದೆ. ಜೂನ್ ೨೧ರಂದು ಉತ್ತರಾರ್ಧಗೋಳದಲ್ಲಿ ಹಗಲು ಅತಿದೀರ್ಘ ಮತ್ತು ರಾತ್ರಿ ಅತಿಕಿರಿದು. ಅಂದು ಅಥವಾ ಜೂನ್ ೨೨ರಂದು ಆರಿದ್ರಾ ಮಳೆ ನಕ್ಷತ್ರ ಹುಟ್ಟುತ್ತದೆ. ಈ ಉತ್ತರಾಯನದಲ್ಲಿ ಸೂರ್ಯ ಮಾರ್ಚ್ ೨೧ರಿಂದ ೪೯ ದಿನಗಳ ನಂತರ, ಅಂದರೆ ಮೇ ೯ರಂದು ೧೨ ೧/೨° ಉತ್ತರ ಅಕ್ಷಾಂಶದ ಮೇಲೆ ನೇರವಾಗಿ ಪ್ರಕಾಶಿಸುತ್ತದೆ. ಆ ದಿನದ ಮಟ್ಟಿಗೆ ತಾಲೂಕಿನ ಜನರಿಗೆ ಭೂಮಧ್ಯ ರೇಖೆಯ ಮೇಲೆ ಇದ್ದಂತಹುದೇ ಅನುಭವ. ಇದಾದ ಒಂದೆರಡು ದಿನಗಳ ನಂತರ, ನಮ್ಮ ಪಂಚಾಂಗದ ಪ್ರಕಾರ, ಮೇ ೧೦ ಅಥವಾ ಮೇ ೧೧ರಂದು ಮಳೆ ನಕ್ಷತ್ರ ಕೃತ್ತಿಕೆ ಹುಟ್ಟುತ್ತದೆ. ಈ ರೀತಿ ಸೂರ್ಯ ತನ್ನ ಉತ್ತರಾಯನದ ಚಲನೆಯಲ್ಲಿ ಮೇ ಒಂಭತ್ತರಂದು ತಾಲ್ಲೂಕಿನ ನೆತ್ತಿಯನ್ನು ದಾಟುವುದೂ, ಮತ್ತು ನಂತರದ ಒಂದೆರಡು ದಿನಗಳಲ್ಲಿ ನಮ್ಮ ಪುರಾತನ ಪಂಚಾಂಗದ ಪ್ರಕಾರ ಮಳೆ ನಕ್ಷತ್ರ ಕೃತ್ತಿಕೆ ಹುಟ್ಟುವುದೂ ತಾಳೆಯಾಗುತ್ತವೆ.

ಭಾರತೀಯ ಉಪಖಂಡದ ಮೇಲೆ ಬೇಸಿಗೆಯ ಬೇಗೆಯನ್ನು ಮುರಿದು ಮಳೆಯ ತಂಪನ್ನೆರೆಯುವ ಮಾನ್ಸೂನ್ ಮಾರುತಗಳು ಸೂರ್ಯನ ಈ ಅಯನದ ಚಲನೆಗಳನ್ನು ಅನುಸರಿಸುತ್ತವೆ. ಕರ್ಕಾಟಕ ಸಂಕ್ರಾಂತಿ ವೃತ್ತವನ್ನು ಜೂನ್ ೨೧ರಂದು ತಲುಪಿ ಮತ್ತು ಭೂಮಧ್ಯ ರೇಖೆಯತ್ತ ತನ್ನ ದಕ್ಷಿಣಾಯನವನ್ನು ಪ್ರಾರಂಭಿಸುವ ಸೂರ್ಯ ೪೪ ದಿನಗಳಲ್ಲಿ ೧೧° ಯಷ್ಟು ಕ್ರಮಿಸಿ ಆಗಸ್ಟ್ ೪ನೆಯ ತಾರೀಖು ಮತ್ತೆ ತಾಲ್ಲೂಕಿನ ನೆತ್ತಿಯ ಮೇಲೆ ಪ್ರಕಾಶಿಸುತ್ತಾನೆ. ಇದರ ಹಿಂದಿನ ದಿನ, ಅಂದರೆ ಆಗಸ್ಟ್ ಮೂರನೇಯ ತಾರೀಖು ನಮ್ಮ ಹಳೆಯ ಪಂಚಾಂಗದ ಪ್ರಕಾರ ಆಶ್ಲೇಷಾ ಮಳೆಯ ನಕ್ಷತ್ರ ಹುಟ್ಟುತ್ತದೆ. ಮಾರ್ಚ್ ೨೧ರ ಅನಂತರ ಕ್ರಮೇಣ ಬಲಗೊಳ್ಳುವ ನೈರುತ್ಯ ಮುಂಗಾರು ಮಾರುತ ಜುಲೈ ತಿಂಗಳಲ್ಲಿ ತಮ್ಮ ಪೂರ್ಣ ಪ್ರಾಬಲ್ಯವನ್ನು ಪಡೆದುಕೊಳ್ಳುತ್ತದೆ. ಅದೇ ರೀತಿ ಸೆಪ್ಟೆಂಬರ್ ೨೩ರಂದು ಸೂರ್ಯನು ಭೂಮಧ್ಯ ರೇಖೆಯನ್ನು ಮತ್ತೆ ದಕ್ಷಿಣದತ್ತ ದಾಟಿದಾಗ ಪ್ರಾರಂಭವಾಗುವ ಈಶಾನ್ಯ ಮಾರುತಗಳು ಜನವರಿ ತಿಂಗಳಲ್ಲಿ ಪೂರ್ಣ ಪ್ರಾಬಲ್ಯ ಪಡೆದುಕೊಳ್ಳುತ್ತವೆ. ಫೆಬ್ರವರಿ ತಿಂಗಳಿನಲ್ಲಿ,

ಶಿವರಾತ್ರಿಯ ವೇಳೆಗೆ ಈಶಾನ್ಯ ಮಾರುತಗಳು ಮಂದವಾಗುತ್ತದೆ. ಬೇಸಿಗೆಯ ತೀವ್ರತೆ ಹೆಚ್ಚತೊಡಗುತ್ತದೆ. ಮತ್ತು ಸಂಜೆಯ ವೇಳೆ ಮತ್ತೆ ನೈರುತ್ಯ ಮಾರುತ, ತಾಲೂಕಿನ ಪಶ್ಚಿಮಕ್ಕಿರುವ ಘಟ್ಟದ ಕಾಡುಗಳ ಸುಗಂಧವನ್ನು ಹೊತ್ತು 'ಎರಲು ಗಾಳಿ' ಎಂಬ ಸ್ಥಳೀಯ ಹೆಸರಿನಿಂದ ಬೀಸತೊಡಗಿ, ಹಗಲಿನ ಧಗೆಗೆ ಸಂಜೆಯ ತಂಪನ್ನು ತರುತ್ತದೆ.

**ಮಳೆ :** ತಾಲೂಕಿನಲ್ಲಿ ೨೦೦೪ರ ಅಂಕಿಅಂಶಗಳ ಪ್ರಕಾರ ೮೩೭.೬ ಮಿ.ಮೀ. ವಾಸ್ತವಿಕ ಮಳೆಯಾಗಿದೆ. ವಾಡಿಕೆ ಮಳೆಯ ಪ್ರಮಾಣ ೮೫೮ ಮಿ.ಮೀ. ಅದೇ ೨೦೦೮ರಲ್ಲಿ ತಾಲೂಕಿನಲ್ಲಿ ೯೩೫ ಮಿ.ಮೀ. ವಾಸ್ತವಿಕ ಮಳೆಯಾಗಿದ್ದು, ಇದು ವಾಡಿಕೆ ಮಳೆ ಪ್ರಮಾಣವಾದ ೮೩೦ ಮಿ.ಮೀ.ಗಿಂತ ಅಧಿಕವಾಗಿತ್ತು. ತಾಲೂಕಿನಲ್ಲಿರುವ ಏಳು ವೃಷ್ಟಿ ಮಾಪನ ಕೇಂದ್ರಗಳಲ್ಲಿ ಆರು ಕಾರ್ಯನಿರ್ವಹಿಸುತ್ತಿದ್ದು, ಉಳಿದೊಂದು ದುರಸ್ತಿಯಲ್ಲಿತ್ತು. ತಾಲೂಕಿನಲ್ಲಿ ಯಾವುದೇ ನದಿ ಇಲ್ಲದೇ ಇರುವುದರಿಂದ ಯಾವುದೇ ಅಣೆಕಟ್ಟೆಯನ್ನು ನಿರ್ಮಿಸಿಲ್ಲ.

**ಪರಿಸರ ಮಾಲಿನ್ಯ :** ಕೈಗಾರಿಕಾ ದೃಷ್ಟಿಯಿಂದ ಈ ತಾಲೂಕನ್ನು ೨೦೦೯–೧೪ರ ಕೈಗಾರಿಕಾ ನೀತಿಯನ್ವಯ ಹಿಂದುಳಿದಿರುವ ಕೈಗಾರಿಕಾ ವಲಯ–III ಕ್ಕೆ ಸೇರಿದ ಪ್ರದೇಶವೆಂದು ಪರಿಗಣಿಸಲಾಗಿದ್ದು, ರಾಜ್ಯ ಸರ್ಕಾರವು ಕೈಗಾರಿಕಾಭಿವೃದ್ಧಿಗಾಗಿ ಸಾಕಷ್ಟು ಪ್ರೋತ್ಸಾಹ ನೀಡುತ್ತಿದೆ. ಕೈಗಾರಿಕೆಗಳಿಂದ ಉಂಟಾಗುವ ಪರಿಸರ ಮಾಲಿನ್ಯ ಹಾಗೂ ಪಟ್ಟಣಗಳಿಂದ ಬರುವ ಕೊಳಚೆ ನೀರುಗಳಿಂದ ನದಿಗಳು ಕಲುಷಿತವಾಗುವುದನ್ನು ನಿಯಂತ್ರಿಸಲು ಸರ್ಕಾರವು ಕರ್ನಾಟಕ ರಾಜ್ಯ ವಾಯು ಮಾಲಿನ್ಯ ನಿಯಂತ್ರಣ ಮಂಡಲಿಯನ್ನು ಸ್ಥಾಪಿಸಿದೆ. ನದಿಯ ದಂಡೆ ಮೇಲಿರುವ ಪಟ್ಟಣಗಳಿಂದ ಬಂದು ಸೇರುವ ಕೊಳಚೆ ನೀರಿನಿಂದಾಗಿ ಹೆಚ್ಚು ಮಾಲಿನ್ಯ ಉಂಟಾಗುತ್ತದೆಂಬ ಅಭಿಪ್ರಾಯವಿದೆ. ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯು ಕಾವೇರಿ ಮತ್ತದರ ಉಪನದಿಗಳ ನೈರ್ಮಲ್ಯತೆಯನ್ನು ತಿಂಗಳಿಗೊಮ್ಮೆ ಪರೀಕ್ಷಿಸುವ ವ್ಯವಸ್ಥೆಯನ್ನು ನಂಜನಗೂಡು ಹಾಗೂ ಸತ್ತೇಗಾಲ ಸೇತುವೆ ಬಳಿ ಮಾಡಿದ್ದು, ಕಾವೇರಿ ನೀರು 'ಸಿ' ವರ್ಗದ ಗುಣಮಟ್ಟ ಹೊಂದಿರುವ ಅಂಶವನ್ನು ಬಹಳ ಹಿಂದೆಯೇ ವ್ಯಕ್ತಪಡಿಸಿದೆ. ಈ ನಿಟ್ಟಿನಲ್ಲಿ ಮಂಡಳಿಯು ಈಗಾಗಲೇ ಕಾರ್ಯಮಗ್ನವಾಗಿದೆ. ವಾಯುಮಾಲಿನ್ಯ ನಿಯಂತ್ರಣಕ್ಕೆ ಸಾರಿಗೆ ಇಲಾಖೆಯೂ ಕ್ರಮ ತೆಗೆದುಕೊಂಡಿದೆ. ಆದರೂ ಕೈಗಾರಿಕೋದ್ಯಮವು ಅಷ್ಟಾಗಿ ಬೆಳೆದಿಲ್ಲದಿರುವುದರಿಂದ ತಾಲೂಕಿನ ಪರಿಸರವು ಅಷ್ಟಾಗಿ ಕಲುಷಿತಗೊಂಡಿಲ್ಲವೆಂದು ಹೇಳಲಾಗುತ್ತದೆ.

* * * *